ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 7th July 1972/Ashadha 16, 1894 (Saka)

The House met in the Assembly Chamber, Vidhana Soudha, at Twelve of the Clock.

MADAM SPEAKER (SMT. K. S. NAGARATHNAMMA) in the Chair.

TAKING UP SOME ADJOURNMENT AND CALL ATTENTION NOTICES

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷಿಣಿಯವರೇ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ತಮ್ಮ ನಿಲುವಳಿ ಸೂಚನೆ ಬಂದಿದೆ ಅದಕ್ಕೆ ತಮಗೆ ಉತ್ತರ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ಈಗಾಗಲೇ ಮೈಸೂರಿನಲ್ಲಿ ಒಬ್ಬರು ಉಪವಾಸ ಕುಳಿತಿದ್ದಾರೆ.

ಅಧ್ಯಕ್ಷರು.—ಇದರ ವಿಚಾರದಲ್ಲಿ ಬೇಕಾದಷ್ಟು ಸಾರಿ ಬೇಕಾದಷ್ಟು ಸಮಯ ಚರ್ಚೆಯಾಗಿದೆ. ಇದನ್ನು ತಗೆದುಕೊಳ್ಳುವುದಕ್ಕೆ ಬರುವುದಿಲ್ಲ ಅಂತ ತಮಗೆ ಉತ್ತರ ಬರುತ್ತದೆ, ತಾವು ಈಗ ಕುಳಿತುಕೊಳ್ಳಿ.

Sri B. B. SAYANAK (Belgaum).—Madam, yesterday, I have given a Notice of Call Attention notice regarding submersion of villages in Malaprabha river. To-day also, it has appeared in the press that one more village has been sudmerged. I request the Government to make a statement early.

MADAM SPEAKER.—Yes; as early as possible.

REVISED BUDGET ESTIMATES FOR 1972-73

Demands for Grants—Demand Nos : 6, 31, 31A, 30B, 32, 47, 48, and 50

(Debate Continued)

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ ಲೋಕೋಪಯೋಗಿ ಇಲಾಖೆಯು ಸಚಿವರು ಮಂಡಿಸಿರುವ ಈ ಇಲಾಖೆಯ ಬೇಡಿಕೆಯನ್ನು ನಾನು ಅತ್ಯಂತ ತೀವ್ರವಾಗಿ ವಿರೋಧಿಸುತ್ತಾ, ಎರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯಸಭಾಧ್ಯಕ್ಷರೇ

†Indicates that the remarks or speeches have not been revised by the member concerned.